
ನಮ್ಮ ಸಫಾರಿಯ ವೇಳೆ ಮೀರಿ ಅದಕ್ಕೆ ಪರ್ಯಾಯವಾಗಿ ರಾತ್ರಿ ಸಫಾರಿಯನ್ನು ಅರೇಂಜ್ ಮಾಡಲಾಗಿತ್ತು. ಹೊಟ್ಟೆಗೆ ಒಂದಷ್ಟು ಸ್ಯಾಂಡ್‌ವಿಚ್ ತಿಂದು ರಾತ್ರಿ ಸಫಾರಿಗೆ ಅಣಿಯಾದೆವು. ಓಲಿಫೆಂಟಾ ರಿವರ್ ಸಫಾರಿಯಲ್ಲಿ ಮೊದಲಿಗೆ ನಮ್ಮನ್ನು ಸ್ವಾಗತಿಸಿದ್ದೇ ಆನೆಗಳು. ತಮ್ಮದೇ ಹೆಸರಿನ ನದಿಯ ಸುತ್ತ ಇರುವ ಕಾಡು ಅವುಗಳ ತವರೂರು. ಕ್ರೂಗರ್ ಎಂಬ ರಕ್ಷಿತ ಅರಣ್ಯ ಹದಿನೇಳು ಸಾವಿರ ಎಕರೆಗಿಂತಲೂ ಬೃಹತ್ತಾದ ಪ್ರದೇಶ. ಅಲ್ಲಿ ಪ್ರಾಣಿಗಳು ಎಲ್ಲಿ ಬೇಕಾದರೂ ಮನಸೋಚ್ಛೆ ತಿರುಗಾಡಬಹುದು. ಆದರೂ ನೀರು ಇರುವಲ್ಲಿ ಎಲ್ಲಾ ಥರದ ಪ್ರಾಣಿಗಳೂ ಬೆಳಿಗ್ಗೆ ಹಾಗೂ ಸಂಜೆ ಬಂದೇ ಬರುತ್ತವೆ. ಮೊದಲೆಲ್ಲಾ ಅಕ್ಕಪಕ್ಕದ ದೇಶಗಳಾದ ಜಿಂಬಾಬ್ವೆ, ಮೊಜಾಂಬಿಕ್ ಮೊದಲಾದ ದೇಶಗಳಿಗೂ ಯಾವುದೇ ಅಡೆತಡೆ ಇಲ್ಲದೆ ಅಲ್ಲಿನ ಪ್ರಾಣಿಗಳು ಸಂಚರಿಸುತ್ತಿದ್ದವಂತೆ. ಆದರೆ ಈಗ ಅಲ್ಲೆಲ್ಲಾ ಅಕ್ರಮವಾಗಿ ಪ್ರಾಣಿಗಳ ಹತ್ಯೆ ನಡೆಯುತ್ತಿರುವುದರಿಂದ ಅಲ್ಲಿಗೆ ಹೋಗದಂತೆ ತಡೆ ಬೇಲಿ ಹಾಕಲಾಗಿದೆ.

ರಾತ್ರಿ ಸಫಾರಿಯಲ್ಲಿ ನಾವೆಲ್ಲಾ ಕೈಯಲ್ಲಿ ದೊಡ್ಡ ಟಾರ್ಚ್ ಹಿಡಿದು ತೆರೆದ ಜೀಪಿನಲ್ಲಿ ಹೊರಟೆವು. ಸುಮಾರು ಮೂರು ತಾಸು ದಟ್ಟ ಕಾಡಿನಲ್ಲಿ ಕಡುಗತ್ತಲಿನಲ್ಲಿ ಟಾರ್ಚ್ ಬೆಳಕಿಗೆ ಫಳ ಫಳ ಹೊಳೆಯುವ ಹಸಿರು ದೀಪಗಳಂತೆ ಕಾಣುವ ಸಾವಿರಾರು ಜಿಂಕೆಗಳನ್ನು ನೋಡುವುದೇ ಸೊಗಸು. ತಾಯಿಯೊಂದಿಗೆ ಮೇಯುತ್ತಿರುವ ಪುಟ್ಟ ಪುಟ್ಟ ಮರಿಯಾನೆಗಳನ್ನು ನೋಡುವುದು ಮತ್ತೂ ಆನಂದ. ಕತ್ತೆತ್ತಿ ನಿಂತಿರುವ ಜಿರಾಫೆಗೆ ಶಬ್ದ ಆಲಿಸುವುದೇ ಸೊಗಸು. ಈ ಎಲ್ಲಾ ಸಸ್ಯಾಹಾರಿ ಪ್ರಾಣಿಗಳಿಗೆ ಕಿವಿ ತುಂಬಾ ಸೂಕ್ಷ್ಮ ಆದರೆ ಕಣ್ಣು ಅಷ್ಟೇನೂ ಅಲ್ಲ. ರಾತ್ರಿಯಲ್ಲಿ ಅವುಗಳ ಕಣ್ಣು ಹಸಿರಾಗಿ ಕಾಣುತ್ತದೆ. ಆನೆ ದಿನಕ್ಕೆ ಎರಡು ಗಂಟೆ ನಿದ್ರಿಸಿದರೆ ಹೆಚ್ಚಂತೆ. ಮಾಂಸಾಹಾರಿ ಪ್ರಾಣಿಗಳು ದಿನದ ಹೊತ್ತು ನಿದ್ರಿಸಿ ರಾತ್ರಿ ಬೇಟೆಯಾಡುತ್ತವೆ. ಸಸ್ಯಾಹಾರಿ ಪ್ರಾಣಿಗಳಿಗೆ ನಿದ್ರೆ ತುಂಬಾ ಕಮ್ಮಿ


ಆನೆ

ಹಾಗೂ ಬಲು ಸೂಕ್ಷ್ಮ. ಅವುಗಳನ್ನು ಬೇಟೆಯಾಡಿ ತಿಂದು ಚಪ್ಪರಿಸುವ ಹುಲಿ, ಸಿಂಹಗಳಿಗೆಲ್ಲಾ ಕತ್ತಲಲ್ಲೂ ಕಣ್ಣು ತುಂಬಾ ಸೂಕ್ಷ್ಮ. ಅವುಗಳ ಕಣ್ಣು ರಾತ್ರಿಯಲ್ಲಿ ಕಿತ್ತಳೆ ಬಣ್ಣದಂತೆ ಕಾಣುತ್ತವೆ. ನಮ್ಮ ಗೈಡ್ ಇಂತಹ ಅದೆಷ್ಟೋ ಮಾಹಿತಿ ಹೇಳುತ್ತಿರುವಾಗಲೇ ನಮ್ಮ ಸಫಾರಿಯ ಕೊನೆಯ ಹಂತದಲ್ಲಿ ಸುಮಾರು ಮೂರ್ನಾಲ್ಕು ವರ್ಷದ ಗಂಡಾನೆ ಮರಿಯೊಂದು ನಮ್ಮ ಸಮೀಪದಲ್ಲೇ ಕಂಡಿತು. ಪಕ್ಕದಲ್ಲೇ ಇನ್ನೊಂದು ಅದೇ ವಯಸ್ಸಿನ ಆನೆಯಿತ್ತು. ನಮ್ಮ ಜೀಪಿನ ಸದ್ದಿಗೆ ಸ್ವಲ್ಪ ಭಯಬಿದ್ದ ಆನೆಮರಿ ಸೊಂಡಿಲೆತ್ತಿ ತನ್ನ ಕೋಪ ತೋರಿಸುತ್ತಿದ್ದಂತೆಯೇ ಅಲ್ಲೇ ಕತ್ತಲಲ್ಲಿ ಎಲ್ಲೋ ನಿಂತಿದ್ದ ಅದರ ಅಮ್ಮ, ನಾವಿದ್ದ ನೆಲ ಕಂಪಿಸುವಂತೆ ಘೀಳಿಟ್ಟಿತು. ಸಫಾರಿ ಮುಗಿದರೂ ಆ ಶಬ್ದ ನಮ್ಮ ಕಿವಿಗಳಲ್ಲಿ ಗುಂಯ್ಗುಡುತ್ತಿತ್ತು.

ಮಾರನೇ ದಿನ ಬೆಳಿಗ್ಗೆ ಐದಕ್ಕೆ ಕ್ರೂಗರ್ ಕಾಡಿನಲ್ಲಿ ನಮ್ಮ ಸಫಾರಿ ಮತ್ತೆ ತೆರೆದ ಜೀಪಿನಲ್ಲಿ ಮುಂದುವರಿದಿತ್ತು. ಇಲ್ಲಿ ಆಫ್ರಿಕಾದ ಬಿಗ್ ಫೈವ್‌ಗಳೆಂದು ಪ್ರಖ್ಯಾತವಾದ ಸಿಂಹ, ಚಿರತೆ, ಘೇಂಡಾಮೃಗ, ಜಿರಾಫೆ, ಆನೆಗಳೆಲ್ಲ ಯಥೇಚ್ಛವಾಗಿವೆ. ಕಾಣುವುದು ಬಿಡುವುದು ನಮ್ಮ ಅದೃಷ್ಟ. ಘೇಂಡಾಮೃಗಗಳ ಸಂತತಿ ಅತೀವವಾದ ಅಕ್ರಮ ಬೇಟೆಯಿಂದಾಗಿ ಅಳಿವಿನಂಚಿನಲ್ಲಿದೆ. ನಿರ್ಜನವಾದ ಕಾಡಿನಲ್ಲಿ ನೂರೈವತ್ತು ಕಿಲೋಮೀಟರ್ ಸ್ಪೀಡಿನಲ್ಲಿ ಹೋಗುತ್ತಿದ್ದ ನಮ್ಮ ಜೀಪಿನ ಗೈಡ್‌ಗೆ ಎದುರು ಸಿಕ್ಕ ಕಾರಿನಲ್ಲಿದ್ದವರು ಬೆಳಿಗ್ಗೆ ಅಲ್ಲೆಲ್ಲೋ ಸಿಂಹದ ಜೋಡಿಯನ್ನು ನೋಡಿದ್ದ ವಿಷಯ ಹೇಳುತ್ತಿದ್ದಂತೆ ತಡಮಾಡದೆ ಆ ದಿಕ್ಕಿನಲ್ಲಿ ಅವನು ಮತ್ತೂ ಸ್ಪೀಡಾಗಿ ಗಾಡಿ ಓಡಿಸಿದ. ದಾರಿಯಲ್ಲಿ ಅಲ್ಲಲ್ಲಿ ಅಪರೂಪದ ಆಫ್ರಿಕನ್ ನೀಲಿ ಹಕ್ಕಿಗಳೂ, ಜಿಂಕೆಗಳೂ, ಜಿರಾಫೆ, ಆನೆ ಇನ್ನಿತರ ಪ್ರಾಣಿಗಳೂ ಕಂಡವು. ಅವನ ಗುರಿ ಮಾತ್ರ ಸಿಂಹಗಳ ಭೇಟಿ ಮಾಡುವತ್ತಲೇ ಇತ್ತು.

ಕಣ್ಣು ಕಾಣುವಷ್ಟು ದೂರಕ್ಕೂ ಹಬ್ಬಿ ನಿಂತ ಕ್ರೂಗರ್ ಎಂಬ ಆ ಕಾಡಿನಲ್ಲಿ ಒಣಗಿದ ಗಿಡಗಂಟೆಗಳು, ಹುಲ್ಲುಕಡ್ಡಿಗಳೂ ಕಂಡು ಕಂಡು ಕಣ್ಣು ದಣಿದಿತ್ತು. ಹಸಿರು ಅಲ್ಲಿ ಮರೀಚಿಕೆ. ಆ ವರ್ಣಸಂಯೋಜನೆಯಲ್ಲಿ ಎಲ್ಲ ಪ್ರಾಣಿಪಕ್ಷಿಗಳೂ ಆರಾಮಾಗಿ ಅಡಗಿಕೊಂಡುಬಿಡಬಹುದು. ಎದುರಿಗೇ ಸಿಂಹ ಕಂಡರೂ ಭ್ರಮೆ ಎಂಬಷ್ಟು ಅದರೊಳಗೆ ಕಲೆತುಹೋಗುವ ಬಣ್ಣ, ಟೆಕ್ಸ್‌ಚರ್ ಎಲ್ಲದರ ಕರಾರುವಾಕ್ ಸಮ್ಮಿಲನ ಆಶ್ಚರ್ಯಕರವಾಗಿತ್ತು. ಗಂಟೆಗಟ್ಟಲೆ ದೂರ ಭರ್ರೆಂದು ಸಾಗಿಬಂದ ಮೇಲೆ ಕೊನೆಗೂ ಕಂಡ ಜೋಡಿ ಸಿಂಹಗಳು ರಸ್ತೆಯ ಪಕ್ಕದಲ್ಲೇ ಪೊದೆಯ ಬಳಿ ಮಲಗಿದ್ದವು. ಅವುಗಳನ್ನು ನೋಡುತ್ತಾ ಹತ್ತು, ಹನ್ನೆರೆಡು ಕಾರುಗಳು ಎದುರಿನಲ್ಲೇ ಜಮಾಯಿಸಿದ್ದವು. ಗಂಡು ಎಚ್ಚರವಿದ್ದು ಸುತ್ತ ನೋಡುತ್ತಾ ತಲೆ ಎತ್ತಿ ಕೂತಿದ್ದರೆ, ಹೆಣ್ಣು ಗಡದ್ದಾಗಿ ನಿದ್ರಿಸುತ್ತಿತ್ತು. ಸುಮಾರು ಅರ್ಧ ಮುಕ್ಕಾಲು ಗಂಟೆಯಾಯಿತು. ಹೆಣ್ಣು ಸಿಂಹ ಏಳುವ ಸೂಚನೆಯೇ ಇಲ್ಲ. ಎಷ್ಟು ನಿದ್ದೆಯೆಂದರೆ ಎದುರಿನಲ್ಲೇ ಎರಡು ಜಿಂಕೆಗಳು ನೀರು ಕುಡಿಯಲು


ಕ್ರೂಗರ್‌ನಲ್ಲಿ ಸೂರ್ಯೋದಯ

ಬಂದು ಹೋದವು! ಉಹೂಂ, ಹಸಿವಿಲ್ಲ, ಬರೀ ನಿದ್ರೆ.

ಗಂಡು ಹೆಣ್ಣು ಸಿಂಹಗಳು ಹೀಗೆ ಕಲೆತಾಗ ಸುಮಾರು ಐದಾರು ದಿನಗಳು ನಿರಂತರ ಕಾಮಕೇಳಿಯಲ್ಲಿ ತೊಡಗುತ್ತವೆ. ಅವು ಗುಂಪಿನಿಂದ ದೂರ, ಸಾಮಾನ್ಯವಾಗಿ ಈ ಸಮಯದಲ್ಲಿ ಬೇಟೆಯಾಡುವುದು ಎಲ್ಲ ವರ್ಜ್ಯ. ಹೆಣ್ಣು ಸಿಂಹ ಏಳುವುದನ್ನು ಕಾದು ಕಾದು ನಮಗೆ ದಣಿವಾದಂತೆಯೇ ಗಂಡಿಗೂ ಬೇಸರ ಹುಟ್ಟಿರಬೇಕು. ಬಾಲ ನೆಕ್ಕಿ ಎಬ್ಬಿಸಲು ಪ್ರಯತ್ನಿಸಿತು. ಒಂದೂಕಾಲು ಗಂಟೆ ಸತಾಯಿಸಿ ಕೊನೆಗೂ ಎದ್ದ ಸಿಂಹಿಣಿ, ಅದನ್ನೇ ಕಾಯುತ್ತಿದ್ದ ಸಿಂಹರಾಜನ ಬಾಹುಗಳಲ್ಲಿ ಬಂಧಿಯಾಯಿತು. ಕಾಮಕೇಳಿ ಮುಗಿಯುತ್ತಿದ್ದಂತೆ ಮತ್ತೆ ಪವಡಿಸಿತು ಸಿಂಹಿಣಿ. ಈ ಮಧ್ಯೆ ನಮ್ಮ ಎಂಟೆದೆಯ ಗೈಡ್ ಮೂತ್ರ ವಿಸರ್ಜನೆಗೆ ಕೆಳಗಿಳಿದು ಹೋಗಿ ಬಂದ! ಬರುವಾಗ ಅವನ ಚಲನೆಯನ್ನು ನೋಡಿದ ಸಿಂಹ ಸರ್‍ರನೆ ಎದ್ದುನಿಂತು ಜೋರಾಗಿ ಸ್ವರ ಹೊರಡಿಸಿ ಸಿಂಹಿಣಿಗೂ ಎಚ್ಚರಾಗಿ, ಕಿವಿ ನಿಮಿರಿಸಿ ಚಟ್ಟನೆ ಎದ್ದುನಿಂತು ಕತ್ತು ಹೊರಳಿಸಿದಾಗ ಒಂದು ಕ್ಷಣ ಎಲ್ಲರ ಜೀವ ಎಡಗೈಗೆ ಬಂದಿತ್ತು!

## ವಿಕ್ಟೋರಿಯಾ ಫಾಲ್ಸ್, ಜಿಂಬಾಬ್ವೆ

ಕ್ರೂಗರ್‌ನಿಂದ ಜೋಬರ್ಗ್‌ಗೆ ಮತ್ತೆ ಪುಟ್ಟ ವಿಮಾನ ಏರಿ ಅಲ್ಲಿಂದ ದೊಡ್ಡ ವಿಮಾನದಲ್ಲಿ ಪಕ್ಕದ ದೇಶ ಜಿಂಬಾಬ್ವೆಯಲ್ಲಿರುವ ವಿಕ್ಟೋರಿಯಾ ಫಾಲ್ಸ್ ನೋಡಲು ಅದೇ ಹೆಸರಿನ ಊರು, ಅಲ್ಲಿರುವ ಏರ್‌ಪೋರ್ಟ್‌ಗೆ ಬಂದಿಳಿದೆವು. ಬಿಸಿಲು ಚುರುಗುಟ್ಟುತ್ತಿತ್ತು. ಹೊರಗಿನ ದೃಶ್ಯ ಮತ್ತೆ ಅದೇ ಒಣಗಿದ ಹುಲ್ಲು, ಗಿಡಗಂಟಿಗಳು. ನಾವಿದ್ದ ಹೋಟೆಲ್‌ನಲ್ಲಿ ಜಾತ್ರೆಗೆ ಸೇರಿದಂತೆ ಜನ ತುಂಬಿದ್ದರು.